**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**Spl.C.NDPS.8/2021**

| | | |
|---|---|---|
| ಸಾಕ್ಷಿದಾರರ ಹೆಸರು | : | ದ್ಯಾಮೇಶ ಹೆಚ್. |
| ತಂದೆಯ/ಗಂಡನ ಹೆಸರು | : | ಕೆ. ಬಿ. ಜಯಪ್ಪ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ಪಿ.ಸಿ. 142, ಅಜಾದ್ ನಗರ ವೃತ್ತ ಕಛೇರಿ, ದಾವಣಗೆರೆ |
| ವಾಸ ಸ್ಥಳ | : | ದಾವಣಗೆರೆ |

ಪಿ.ಡಬ್ಲ್ಯೂ 5

ಸಿ.ಡಬ್ಲ್ಯೂ 9

ದಿ: 15-10-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

1. CEN ಪೊಲೀಸ್ ಠಾಣೆಯಲ್ಲಿ ನಾನು ಜುಲೈ 2019 ರಿಂದ ಜುಲೈ 2022 ರವರೆಗೆ ಪಿ.ಸಿ. ಆಗಿ ಕೆಲಸ ಮಾಡಿದ್ದೇನೆ. ಈ ಪ್ರಕರಣದಲ್ಲಿ ದಿಃ 03-04-2021 ರಂದು ಬೆಳಿಗ್ಗೆ 10.00 ಗಂಟೆಗೆ ಠಾಣೆಯಲ್ಲಿರುವಾಗ ನನಗೆ, ಚಾಸಾ-5, 6 7, 8, 10, ರವರಗೆ ಚಾಸಾ-1 ರವರು ಬಾತ್ಮಿದಾರರಿಂದ ಗಾಂಜಾ ಮಾರಾಟದ ಬಗ್ಗೆ ಮಾಹಿತಿ ತಿಳಿದು ಬಂದಿದೆ ದಾಳಿ ಮಾಡಲು ready ಇರಿ ಅಂತ ತಿಳಿಸಿರುತ್ತಾರೆ. ನಂತರ ಚಾಸಾ-1 ರವರು ದಾಳಿ ಮಾಡಲು ಎಸ್.ಪಿ. ರವರಿಗೆ ಮತ್ತು ಪತ್ರಾಂಕಿತ ಅಧಿಕಾರಿಗಳು ಬೇಕಾಗಿದ್ದರಿಂದ ಚಾಸಾ-7 ರವರ ಮುಖಾಂತರ ಮನವಿ ಪತ್ರವನ್ನು ಎಸ್.ಪಿ. ಕಛೇರಿಗೆ ನೀಡಿದ್ದು, ಈ ಮನವಿ ಪತ್ರ ಸ್ವೀಕರಿಸಿದ ನಂತರ ಪತ್ರಾಂಕಿತ ಅಧಿಕಾರಿಗಳಾಗಿ ಚಾಸಾ-4 ರವರನ್ನು ಕಳುಹಿಸಿರುತ್ತಾರೆ. ಚಾಸಾ-8 ರವರ ಮುಖಾಂತರ ಇಬ್ಬರು ಸರ್ಕಾರಿ ಪಂಚರನ್ನು ನೇಮಕ ಮಾಡಲು ಅಬಕಾರಿ ಇಲಾಖೆಗೆ ಮನವಿ ಪತ್ರವನ್ನು ಕಳುಹಿಸಿದ್ದು, ಅದರಂತೆ ಅವರು ಚಾಸಾ-2 ಮತ್ತು 3 ರವರನ್ನು ನೇಮಕ ಮಾಡಿ ಠಾಣೆಗೆ ಕಳುಹಿಸಿರುತ್ತಾರೆ.

ನಂತರ ದಾಳಿ ಮಾಡಲು ಪಂಚರಾಗಿ ಸಹಕರಿಸಿ ಅಂತ ಚಾಸಾ-10 ರವರ ಮುಖಾಂತರ ಪಂಚರಿಗೆ ನೋಟಿಸ್ಸು ನೀಡಿರುತ್ತಾರೆ. ನಂತರ ಬೆಳಿಗ್ಗೆ 11.00 ಗಂಟೆಗೆ ನಾವೆಲ್ಲರೂ ಠಾಣೆಯನ್ನು ಬಿಡುವಾಗ ಲ್ಯಾಪಟಾಪ್, ಹ್ಯಾಂಡಿ ಕ್ಯಾಮರಾ, ತೂಕದ ಯಂತ್ರ ಮತ್ತು ತನಿಖೆಗೆ ಸಂಬಂಧ ಪಟ್ಟ ಕಿಟ್ ನ್ನು ತೆಗೆದುಕೊಂಡು ಎರಡು ಇಲಾಖಾ ವಾಹನಗಳಲ್ಲಿ ಠಾಣೆಯನ್ನು ಬಿಟ್ಟು ಮಾಹಿತಿ ಸ್ಥಳವಾದ ಬಾಡಾ ಕ್ರಾಸ್ ಗೆ ಬೆಳಿಗ್ಗೆ 11.30 ಗಂಟೆಗೆ ತಲುಪಿ ಅಲ್ಲಿ ಇರುವ ಗಣಪತಿ ದೇವಸ್ಥಾನ ಹಿಂಭಾಗ ಮರೆಯಾಗಿ ವೀಕ್ಷಿಸಲಾಗಿ ಮತ್ತು ಚಾಸಾ-1 ಮತ್ತು 4 ರವರು ಹಾಗೂ ಪಂಚರು, ಸಿಬ್ಬಂದಿಗಳು ಪರಸ್ಪರ ಅಂಗ ಶೋಧನೆ ಮಾಡಿಕೊಂಡು ತಮ್ಮ ಬಳಿ ಯಾವುದೇ ಗಾಂಜಾ ವಸ್ತು ಇಲ್ಲ ಅಂತ ಖಚಿತಪಡಿಸಿಕೊಂಡರು. ನಾವು ದೂರದಿಂದ ಅಲ್ಲಿ ಮರೆಯಾಗಿ ವೀಕ್ಷಿಸುತ್ತಿರುವಾಗ ಅಲ್ಲಿ ಇಬ್ಬರು ವ್ಯಕ್ತಿಗಳು ನಿಂತಿದ್ದು, ಅವರ ಕೈಯಲ್ಲಿ ಚೀಲ ಹಿಡಿದುಕೊಂಡಿದ್ದನ್ನು ನೋಡಿ ಅವರ ಮೇಲೆ ಬೆಳಿಗ್ಗೆ 11.40 ಗಂಟೆಗೆ ದಾಳಿ ಮಾಡಲು ಹೋದಾಗ ಚೀಲ ಬಿಟ್ಟು ಆಸ್ಸಾಮಿಗಳು ಓಡಲು ಪ್ರಾರಂಭಿಸಿದಾಗ ಸುತ್ತುವರೆದು ಸಿಬ್ಬಂದಿ ಮತ್ತು ಪಂಚರ ಸಮಕ್ಷಮದಲ್ಲಿ ಆ ಇಬ್ಬರು ವ್ಯಕ್ತಿಗಳನ್ನು ಹಿಡಿದು ನಿಲ್ಲಿಸಿ, ಆಸ್ಸಾಮಿಗಳ ಹೆಸರು ಮತ್ತು ವಿಳಾಸವನ್ನು ಕೇಳಲಾಗಿ ಒಬ್ಬನ ಹೆಸರು ಅಂತರಾಮ ತೀರ್ಕಿ, ದೋಣಿ ಓಡಿಸುವ ಕೆಲಸ, ವಾಸಃ ಗೋವಾ ಮತ್ತು ಇನ್ನೊಬ್ಬನ ಹೆಸರು ಮಧುರಾಜ @ ಮಧುನಾಯ್ಕು, ಹಣ್ಣಿನ ವ್ಯಾಪಾರ, ವಾಸಃ ಗೋವಾ ಅಂತ ತಿಳಿಸಿರುತ್ತಾರೆ. ಸಾಕ್ಷಿಯು ವಿಸಿಯಲ್ಲಿ ಹಾಜರುಪಡಿಸಿದ 2 ನೇ ಆರೋಪಿಯನ್ನು ನೋಡಿ ಗುರುತಿಸುತ್ತಾರೆ. ಚಾಸಾ-1 ರವರು ಈ ಇಬ್ಬರ ವ್ಯಕ್ತಿಗಳ ಕೈಯಲ್ಲಿರುವ ಚೀಲದಲ್ಲಿ ಏನಿದೆ ಅಂತ ವಿಚಾರಿಸಿದಾಗ ಅವರು ಅದು ಗಾಂಜಾ ಅಂತ ತಿಳಿಸಿರುತ್ತಾರೆ. ಇದನ್ನು ಎಲ್ಲಿಂದ ತಂದಿರುವ ಬಗ್ಗೆ ವಿಚಾರಿಸಿದಾಗ ಅವರು ಅನಿಲ ಜಾಕಬ್ (3 ನೇ ಆರೋಪಿ.) ಗೋವಾದ ಕೋಲ್ವಾ ಬೀಚ್ ನಿಂದ ತಂದಿರುವುದಾಗಿ ತಿಳಿಸಿದರು. 3 ನೇ ಆರೋಪಿತನು ನಮಗೆ ಗಾಂಜಾವನ್ನು ಕೊಟ್ಟು ಮಾರಾಟ ಮಾಡಿ ಬಂದ ಹಣದಿಂದ ಅವರಿಗೆ ಸ್ವಲ್ಪ ಹಣವನ್ನು ನೀಡಿ ಉಳಿದ ಹಣವನ್ನು ಆರೋಪಿತರು ಇಟ್ಟುಕೊಳ್ಳುವಂತೆ ಹೇಳಿರುವುದಾಗಿ ನಮಗೆ ಆರೋಪಿತರು ತಿಳಿಸಿರುತ್ತಾರೆ. ಚಾಸಾ-1 ರವರು ಸದರಿ ಪ್ಲಾಸ್ಟಿಕ್ ಚೀಲವನ್ನು ಕೆಳಗೆ ಹಾಕಿದರು. ಅದರಲ್ಲಿ

03 ಬ್ರೌನ್ ಕಲರ್ ಟೇಪ್ ನಿಂದ ಸುತ್ತಿದ ಗಾಂಜಾ ಮತ್ತು ಒಂದು ಬಿಳಿ ಬಣ್ಣದ ಬಟ್ಟೆಯಲ್ಲಿ ಗಾಂಜಾ ಇತ್ತು. ಅದನ್ನು ಚಾಸಾ-7 ರವರ ಮುಖಾಂತರ ತೂಕ ಯಂತ್ರ ತರಿಸಿ ಒಂದೊಂದನ್ನೇ ತೂಕ ಮಾಡಲಾಗಿ ಮೊದಲನೇ ಪ್ಯಾಕ್ ನಲ್ಲಿ 2 ಕೆ.ಜಿ. 110 ಗ್ರಾಂ. ಗಾಂಜಾ, ಸುಮಾರು ₹.52,500/- ಬೆಲೆ ಬಾಳುವ ಗಾಂಜಾ, ಎರಡನೇ ಪ್ಯಾಕ್ ನಲ್ಲಿ 2 ಕೆ.ಜಿ. 215 ಗ್ರಾಂ. ₹.53,000/- ಬೆಲೆ ಬಾಳುವ ಗಾಂಜಾ ಮೂರನೇ ಪ್ಯಾಕ್ ನಲ್ಲಿ 2 ಕೆ.ಜಿ. 185 ಗ್ರಾಂ. ₹.52,500/- ಬೆಲೆ ಬಾಳುವ ಗಾಂಜಾ, ನಾಲ್ಕನೇ ಬಿಳಿ ಬಟ್ಟೆಯಲ್ಲಿರುವ ಗಾಂಜಾವನ್ನು ತೂಕ ಮಾಡಿದಾಗ ಅದು 2 ಕೆ. ಜಿ. 90 ಗ್ರಾಂ., ಬೆಲೆ ₹.52,000/-ಇತ್ತು. ಒಟ್ಟು 8 ಕೆ.ಜಿ. 600 ಗ್ರಾಂ. ಗಾಂಜಾ ಇತ್ತು. ಅದು ಹೂವು ಕಾಂಡ ಮತ್ತು ಮೊಗ್ಗಿನಿಂದ ಕೂಡಿರುತ್ತದೆ. ಚಾಸಾ-1 ರವರು 2 ನೇ ಆರೋಪಿಯ ಅಂಗ ಶೋಧನೆ ಮಾಡಲು ಪತ್ರಾಂಕಿತ ಅಧಿಕಾರಿ ಚಾಸಾ-4 ರವರ ಸಮಕ್ಷಮ ಆರೋಪಿಗೆ ಒಪ್ಪಿಗೆ ಕೇಳಿ ನೋಟಿಸ್ಸು ನೀಡಿ ಒಪ್ಪಿಗೆ ಪಡೆದಿರುತ್ತಾರೆ. ನಂತರ 2 ನೇ ಆರೋಪಿಯ ಅಂಗ ಶೋಧನೆ ಮಾಡಿದಾಗ ಆರೋಪಿಯ ಜೇಬಿನಲ್ಲಿ 100 ಮುಖಬೆಲೆಯ 9 ನೋಟುಗಳು ಮತ್ತು 25 ಪಾಲಿಥಿನ ಕವರ್ ಗಳು ಇದ್ದವು. ಈ ವಸ್ತುಗಳು ಎಲ್ಲಿಂದ ಬಂತು ಅಂತ ಕೇಳಿದಾಗ ಗಾಂಜಾ ಮಾರಾಟ ಮಾಡಿ ಗಳಿಸಿದ ಹಣ ಮತ್ತು ಈ ಪಾಲಿಥಿನ ಕವರ್ ಗಳಲ್ಲಿ ಗಾಂಜಾ ಇಟ್ಟು ಮಾರಾಟ ಮಾಡುವುದಾಗಿ ತಿತಳಿಸಿದರು. ನಂತರ 1 ನೇ ಆರೋಪಿಯ ಅಂಗ ಶೋಧನೆ ಮಾಡಿದಾಗ ಅವನ ಹತ್ತಿರ ಗಾಂಜಾದ ವಸ್ತುಗಳು ದೊರಕಿರುವುದಿಲ್ಲ. ಅವನ ಬಳಿ ಇರುವ MI ಕಂಪನಿಯ Android ಮೊಬೈಲ್ ದೊರಕಿರುತ್ತದೆ. ಇವುಗಳನ್ನು ಚಾಸಾ-1 ರವರು ಚಾಸಾ-7 ರವರ ಮುಖಾಂತರ 4 ಗಾಂಜಾ ಪ್ಯಾಕೆಟ್ ಗಳನ್ನು ಮತ್ತು ಮೊಬೈಲ್ ನ್ನು ಮತ್ತು ಹಣವನ್ನು ಪಾಲಿಥಿನ ಕವರ್ ಗಳನ್ನು ಪ್ರತ್ಯೇಕವಾಗಿ ಬಿಳಿ ಚೀಲದಲ್ಲಿ ಹೊಲಿದು CEN ಎಂಬ ಅರಗು ಸೀಲಿನಲ್ಲಿ ಸೀಲ್ ಮಾಡಿ ಫೋಟೋ ಮಾಡಿ, ಬೆಳಿಗ್ಗೆ 11.40 ರಿಂದ ಮಧ್ಯಾಹ್ನ 1.30 ರವೆರೆಗೆ ಪಂಚನಾಮೆಯನ್ನು ಜರುಗಿಸಿರುತ್ತಾರೆ. ಆ ಪಂಚನಾಮೆಯನ್ನು ಈಗ ನೋಡಿ ಅದರಲ್ಲಿರುವ ನನ್ನ ಸಹಿ ಗುರುತಿಸುತ್ತೇನೆ. ಪಂಚನಾಮೆಯನ್ನು ಈಗಾಗಲೇ ನಿಪಿ-12 ಅಂತ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-12(ಇ) ಅಂತ ಗುರುತಿಸಲಾಯಿತು. 1 ನೇ ಆರೋಪಿಗೆ ಹಿಂದಿ ಭಾಷೆ

ಬರುತ್ತಿದ್ದು, ಚಾಸಾ-4 ರವರಿಗೆ ಹಿಂದಿ ಮತ್ತು ಕನ್ನಡ ಎರಡು ಭಾಷೆ ಬರುತ್ತಿರುವುದರಿಂದ ಅವನಿಗೆ ಹಿಂದಿಯಲ್ಲಿ ಮಾತನಾಡಿಸಿ ಕನ್ನಡದಲ್ಲಿ ಪಂಚನಾಮೆಯನ್ನು ಟೈಪ್ ಮಾಡಲು ಸಹಾಯ ಮಾಡಿದರು. ಚಾಸಾ-3 ರವರು ಸದರಿ 1 ನೇ ಆರೋಪಿಗೆ ಕನ್ನಡ ಭಾಷೆಯಿಂದ ಹಿಂದಿ ಭಾಷೆಗೆ ತರ್ಜುಮೆ ಮಾಡಿ ತಿಳಿಸಿದರು. ಜಪ್ತು ಪಂಚನಾಮೆಯ ಸಮಯದಲ್ಲಿ ನಿಪಿ-13 ರಿಂದ 21 ರವರೆಗೆ ಪೋಟೋ ತೆಗೆದಿರುತ್ತಾರೆ. ಈ ಪೋಟೋಗಳಲ್ಲಿ ನಾನು,ಚಾಸಾ-1 ರಿಂದ 4, ಸಿಬ್ಬಂದಿಗಳು ಮತ್ತು ಆರೋಪಿತರು ಕಂಡು ಬರುತ್ತೇವೆ ಹಾಗೂ ಗಾಂಜಾ ಕಂಡು ಬರುತ್ತದೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮು.ಮಾ.1 ರಿಂದ 8 ನ್ನು ನೋಡಿ ಗುರುತಿಸುತ್ತಾರೆ. (ಮು.ಮಾ.5 , 100 ಮುಖಬೆಲೆಯ 09 ನೋಟುಗಳು Treasury box ನಲ್ಲಿದ್ದು ಅದನ್ನು ಗುರುತಿಸುವ ಬಗ್ಗೆ ಆರೋಪಿತರ ಪರ ವಕೀಲರು ತಕರಾರು ಇಲ್ಲ ಅಂತ ಹೇಳುತ್ತಾರೆ. )

2. ಚಾಸಾ-1 ರವರ ಸೂಚನೆ ಮೇರೆಗೆ ಠಾಣೆಯ ಸೋನಿ ಹ್ಯಾಂಡಿ ಕ್ಯಾಮರಾದಿಂದ ಪಂಚನಾಮೆಯ ಸಮಯದಲ್ಲಿ ಪೋಟೋಗಳನ್ನು ತೆಗೆದಿದ್ದೇನೆ. ಆ ಪೋಟೋಗಳು ಈಗಾಗಲೇ ನಿಪಿ-13 ರಿಂದ 21 ಅಂತ ಗುರುತಿಸಲಾಗಿದೆ. ನಾನು ತೆಗೆದ ಪೋಟೋಗಳನ್ನು ಕ್ಯಾಮರಾವನ್ನು ಕಂಪ್ಯೂಟರ್ ಗೆ ಡಾಟಾ ಕೇಬಲ್ ಮೂಲಕ ಕನೆಕ್ಟ್ ಮಾಡಿ ಪೋಟೋಗಳನ್ನು ಡೌನಲೋಡ್ ಮಾಡಿ ಪೆನಡ್ರೈವ್ ನಲ್ಲಿ ಸಂಗ್ರಹಿಸಿಕೊಂಡು ನಂತರ ದಾವಣಗೆರೆಯ ಡೆಂಟಲ್ ಕಾಲೇಜು ಬಳಿ ಇರುವ ಸುರಭಿ ಪೋಟೋ ಸ್ಟುಡಿಯೋದಲ್ಲಿ ಯಥಾ ಸ್ಥಿತಿಯಲ್ಲಿ ಪೋಟೋಗಳನ್ನು ಪ್ರಿಂಟ್ ಹಾಕಿಸಿ, ಡಿವಿಡಿ ಮಾಡಿಸಿಕೊಂಡು ಬಂದು65B ಪ್ರಮಾಣ ಪತ್ರದೊಂದಿಗೆ ಚಾಸಾ-1 ರವರಿಗೆ ಹಾಜರುಪಡಿಸಿರುತ್ತೇನೆ. ಆ ಡಿವಿಡಿಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-28 ಅಂತ, ಸಾಕ್ಷಿಯ ಸಹಿಯನ್ನು ನಿಪಿ-28(ಎ) ಅಂತ ಗುರುತಿಸಲಾಯಿತು. ಆರೋಪಿ ಪರ ವಕೀಲರು ಸದರಿ ಸಿಡಿಯನ್ನು ಗುರುತಿಸುವ ಬಗ್ಗೆ ಕಲಂ 65B(2) and (4) Evidence Act ಅಡಿಯಲ್ಲಿ ಸಲ್ಲಿಸಿರುವುದಿಲ್ಲ ಅಂತ ತಕರಾರು ಮಾಡಿರುತ್ತಾರೆ. ಪಿ.ಪಿ. ರವರು 65B ಪ್ರಮಾಣ ಪತ್ರ ಇದೇ ಅಂತ ಹೇಳುತ್ತಾರೆ. ಅದು ಈಗಾಗಲೇ ನಿಪಿ-25 ಅಂತ ಗುರುತಿಸಲಾಗಿದೆ. ಅದನ್ನು ಈಗ ನಾನು ನೋಡಿ ಅದರಲ್ಲಿರುವ ನನ್ನ ಸಹಿ ಗುರುತಿಸುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ-25(ಎ) ಅಂತ ಗುರುತಿಸಲಾಯಿತು.

(ಈಗಾಗಲೇ 65B ಪ್ರಮಾಣ ಪತ್ರವನ್ನು ಗುರುತು ಆಗಿರುವುದರಿಂದ ಆರೋಪಿ ಪರ ವಕೀಲರು ತಮ್ಮ ತಕರಾರನ್ನು arguments ಮಾಡುವ ಕಾಲಕ್ಕೆ ಪರಿಗಣಿಸಲಾಗುವುದು.)

3. ದಿಃ 05-04-2021 ರಂದು ಸಂಜೆ 6.00 ರಿಂದ 7.00 ಗಂಟೆಯುವರೆಗೆ ದಾವಣಗೆರೆಯ 2 ನೇ ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಇನ್ವೆಂಟರಿ ಮಾಡಿಸುವ ಸಮಯದಲ್ಲಿ ನ್ಯಾಯಾಧೀಶರ ಅನುಮತಿ ಮೇರೆಗೆ ವಿಡಿಯೋ ಮಾಡಿ ಪೋಟೋ ತೆಗೆದಿರುತ್ತೇನೆ. ನಂತರ ಹ್ಯಾಂಡಿ ಕ್ಯಾಮರಾವನ್ನು ಡಾಟಾ ಕೇಬಲ್ ಮುಖಾಂತರ ಕಂಪ್ಯೂಟರ್ ಗೆ ಕನೆಕ್ಟ್ ಮಾಡಿ ವಿಡಿಯೋ ಮತ್ತು ಪೋಟೋವನ್ನು ಡೌನಲೋಡ್ ಮಾಡಿ ಪೆನಡ್ರೈವ್ ನಲ್ಲಿ ಸಂಗ್ರಹಿಸಿಕೊಂಡು ನಂತರ ದಾವಣಗೆರೆಯ ಡೆಂಟಲ್ ಕಾಲೇಜು ಬಳಿ ಇರುವ ಸುರಭಿ ಪೋಟೋ ಸ್ಟುಡಿಯೋದಲ್ಲಿ ಯಥಾ ಸ್ಥಿತಿಯಲ್ಲಿ ಪೋಟೋಗಳನ್ನು ಪ್ರಿಂಟ್ ಹಾಕಿಸಿ, ಡಿವಿಡಿ ಮಾಡಿಸಿಕೊಂಡು ಬಂದು 65B ಪ್ರಮಾಣ ಪತ್ರದೊಂದಿಗೆ ಚಾಸಾ-1 ರವರಿಗೆ ಹಾಜರುಪಡಿಸಿರುತ್ತೇನೆ. ಇನ್ವೆಂಟರಿ ಮಾಡುವ ಕಾಲಕ್ಕೆ ಮಾದರಿಯಾಗಿ ತಲಾ 50 ಗ್ರಾಂ. ಗಾಂಜಾವನ್ನು 04 ಪ್ಯಾಕೆಟ್ ಗಳಿಂದ ತೆಗೆದುಕೊಂಡು ನ್ಯಾಯಾಧೀಶರರವರ ಸಮಕ್ಷಮ ಬಿಳಿ ಬಟ್ಟೆಯಿಂದ ಪ್ಯಾಕ್ ಮಾಡಿ ರಾಸಾಯನಿಕ ಪರೀಕ್ಷೆ ಸಲುವಾಗಿ ಸೀಲ್ ಮಾಡಲಾಯಿತು. ಇನ್ವೆಂಟರಿ ಸಮಯದಲ್ಲಿ ತೆಗೆದ ಪೋಟೋವನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-29 ಅಂತ ಗುರುತಿಸಲಾಯಿತು. ಇನ್ವೆಂಟರಿಗೆ ಸಂಬಂಧಿಸಿದ ಡಿವಿಡಿಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-30 ಅಂತ, ಸಾಕ್ಷಿಯ ಸಹಿಯನ್ನು ನಿಪಿ-30(ಎ) ಅಂತ ಗುರುತಿಸಲಾಯಿತು. ಅದಕ್ಕೆ ಸಂಬಂಧಪಟ್ಟ 65B ಪ್ರಮಾಣ ಪತ್ರವನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-31 ಅಂತ, ಸಾಕ್ಷಿಯ ಸಹಿಯನ್ನು ನಿಪಿ-31(ಎ) ಅಂತ ಗುರುತಿಸಲಾಯಿತು. ಪಂಚನಾಮೆ ಮಾಡುವ ಕಾಲಕ್ಕೆ ನಾನು ನೋಡಿದ 2 ನೇ ಆರೋಪಿ ಈ ದಿನ ತೆರೆದ ನ್ಯಾಯಾಲಯದಲ್ಲಿ ವಿಸಿ ಮುಖಾಂತರ ಹಾಜರಿದ್ದು ಅವರನ್ನು ನೋಡಿ ಗುರುತಿಸುತ್ತೇನೆ. (ಸದರಿ 2 ನೇ ಆರೋಪಿಯನ್ನು ಗೋವಾ ಕಾರಾಗೃಹದಿಂದ BW ಮೇಲೆ ಹಾಜರು ಮಾಡಿರುತ್ತಾರೆ.) ಇನ್ವೆಂಟರಿಗೆ ಸಂಬಂಧಪಟ್ಟ ಪೋಟೋ, ಡಿವಿಡಿ, ಪ್ರಮಾಣ ಪತ್ರಗಳನ್ನು ಚಾಸಾ-13 ರವರಿಗೆ ನೀಡಿರುತ್ತೇನೆ. 4 ಪ್ಯಾಕೆಟ್ ಗಳಿಂದ ಮಾದರಿಗಾಗಿ

ತೆಗೆದಿರುವಂತಹ ತಲಾ 50 ಗ್ರಾಂ. ಗಾಂಜಾವನ್ನು ಈಗಾಗಲೇ ಮು.ಮಾ.1 ರಿಂದ 4 ಅಂತ ಗುರುತಿಸಲಾಗಿದೆ. ಅವುಗಳನ್ನು ನೋಡಿ ಗುರುತಿಸುತ್ತೇನೆ.

**ಪಾಟೀ ಸವಾಲುಃ ಶ್ರೀ ಕೆ.ಕೆ.(ಎಲ್.ಎ.ಡಿ.ಸಿ.) ವಕೀಲರಿಂದ 2 ನೇ ಆರೋಪಿತರ ಪರವಾಗಿ**:

4. 2 ನೇ ಆರೋಪಿಯು ನನ್ನ ಸಮಕ್ಷಮ, ಚಾಸಾ-1 ಮತ್ತು 4 ರವರ ಸಮಕ್ಷಮ ಏನೂ ಹೇಳಿಲ್ಲ ಅಂದರೆ ಸರಿಯಲ್ಲ. ನಾನು ಹೇಳಿದ ರೀತಿಯಲ್ಲಿ ನಾನು ಅಥವಾ ಚಾಸಾ-1 ಅಥವಾ ಚಾಸಾ-4 ರವರು ಯಾವುದೇ ಮಾಹಿತಿಯನ್ನು 2 ನೇ ಆರೋಪಿಗೆ ನೀಡಿಲ್ಲ ಅಂದರೆ ಸರಿಯಲ್ಲ. 2 ನೇ ಆರೋಪಿ ನಮ್ಮ ಸಮಕ್ಷಮ ಯಾವುದೇ ದಾಖಲೆಗಳಿಗೆ ಸಹಿ ಮಾಡಿಲ್ಲ ಅಂದರೆ ಚಾಸಾ-1 ರವರ ಸಮಕ್ಷಮ ಮಾಡಿದ್ದಾರೆ. ಪಂಚನಾಮೆಯ ಸಮಯದಲ್ಲಿ ಸ್ವತಂತ್ರ ಸಾಕ್ಷಿದಾರರು ಯಾರೂ ಇರಲಿಲ್ಲ ಅಂದರೆ ಸರಿಯಲ್ಲ. ಗಣೇಶ ದೇವಸ್ಥಾನದ ಬಳಿ ಯಾವಾಗಲೂ ಜನ ಇದ್ದೇ ಇರುತ್ತಾರೆ ಅಂದರೆ ಸರಿಯಲ್ಲ. ಎನ್.ಹೆಚ್.48 ರಸ್ತೆಯು ಗಣಪತಿ ದೇವಸ್ಥಾನದ ಹತ್ತಿರ ಕೂಡುತ್ತದೆ ಅಲ್ಲಿ Traffic signal and CCTV camera ಇರುತ್ತದೆ ಮತ್ತು ಅಲ್ಲಿ ಯಾವಾಗಲೂ traffic ಪೊಲೀಸರು ಇದ್ದೇ ಇರುತ್ತಾರೆ ಅಂದರೆ ಸರಿಯಲ್ಲ ಇತ್ತಿಚೇಗೆ ಸಿಸಿಟಿವಿ ಅಳವಡಿಸಿರುತ್ತಾರೆ. 2 ನೇ ಆರೋಪಿಯಿಂದ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ. ನಿಪಿ-13 ರಿಂದ 23 ನ್ನು ಈ ಕೇಸಿಗೋಸ್ಕರ ಸೃಷ್ಟಿ ಮಾಡಿದ್ದು ಅಂದರೆ ಸರಿಯಲ್ಲ. ಆರೋಪಿತರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವುದು ಎಲ್ಲಾ ಸುಳ್ಳು ಅಂದರೆ ಸರಿಯಲ್ಲ.

5. ನಾನು ಈ ಪ್ರಕರಣದಲ್ಲಿ ವಿಡಿಯೋ ಮಾಡಿಲ್ಲ ಅಂದರೆ ಅಮಾನತ್ತು ಪಂಚನಾಮೆಯ ಕಾಲಕ್ಕೆ ವಿಡಿಯೋ ಮಾಡಿದ್ದೇನೆ. ನಿಪಿ-25 ಮತ್ತು 31 ರಲ್ಲಿ Hash value ಇರುವುದಿಲ್ಲ ಅಂದರೆ ನಿಜ. ಸಾಕ್ಷಿದಾರರು ಹೇಳುತ್ತಾರೆ ಹ್ಯಾಂಡಿ ಕ್ಯಾಮರಾ ಹಳೆದಾಗಿದ್ದು ಹಾಗೂ ಡಿಜಿಟಲ್ ವ್ಯವಸ್ಥೆ ಇರಲಿಲ್ಲ. ಈ ವಿಷಯವನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಹ್ಯಾಂಡಿ ಕ್ಯಾಮರಾ ತನಿಖಾಧಿಕಾರಿಗಳ ಸ್ವಾಧೀನದಲ್ಲಿರುತ್ತದೆ ಅಂದರೆ ನಿಜ. ನಿಪಿ-25 ಮತ್ತು 31 ರಲ್ಲಿ ನಾನು ಸೋನಿ ಹ್ಯಾಂಡಿ ಕ್ಯಾಮರಾ ಅಂತ

ಹೇಳಿಲ್ಲ ಇದೇ ಮೊದಲು ಸಾರಿ ನ್ಯಾಯಾಲಯದಲ್ಲಿ ಹೇಳುತ್ತಿದ್ದೀರಿ ಅಂದರೆ ಸರಿ ಇದೇ ಸೋನಿ ಹ್ಯಾಂಡಿ ಕ್ಯಾಮಾರದಿಂದ ಪೋಟೋ ತೆಗೆದಿದ್ದೇನೆ. ನಿಪಿ-13 ರಿಂದ 21 ರ ಬಗ್ಗೆ ನಾನು Meta data and meta image ಮಾಡಿಸಿಲ್ಲ ಅಂದರೆ ನಿಜ. ಸಾಕ್ಷೀದಾರರು ಹೇಳುತ್ತಾರೆ ಡಿಜಿಟಲ್ ವ್ಯವಸ್ಥೆ ಇರಲಿಲ್ಲ ಆದ್ದರಿಂದ ಮಾಡಿಲ್ಲ. ಡಿಜಿಟಲ್ ವ್ಯವಸ್ಥೆ ಇರಲಿಲ್ಲ ಅಂತ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಯಾವ ಕಂಪನಿಯಿಂದ ಪರಿಕರಗಳನ್ನು ಡೌನಲೋಡ ಮಾಡಿದ್ದನ್ನು ನಿಪಿ-25 ಮತ್ತು 31 ರಲ್ಲಿ ನಮೂದು ಮಾಡಿಲ್ಲ ಅಂದರೆ ನಿಜ. ಕಲಂ 65B ಪ್ರಮಾಣ ಪತ್ರವನ್ನು ಸುರಭಿ ಪೋಟೋ ಸ್ಡುಡಿಯೋದಿಂದ ಹಾಕಿಸಿರುವುದಿಲ್ಲ. ನನ್ನಿಂದ ಮತ್ತು ಸುರಭಿ ಪೋಟೋ ಸ್ಟುಡಿಯೋ Chain of custody form ತೆಗೆದುಕೊಂಡಿಲ್ಲ. ಸಾಕ್ಷಿದಾರರು ಹೇಳುತ್ತಾರೆ ಆ ಡಿಜಿಟಲ್ ವ್ಯವಸ್ಥೆ ಆ ದಿನ ಇರಲಿಲ್ಲ. ಈ ವಿಷಯವನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿಪಿ-28 ಮತ್ತು 30 ನಾನು ಡಿವಿಡಿ ಕವರ್ ನಲ್ಲಿ ಹಾಕಿದ್ದೇನೆ ಪ್ಯಾರೇಡೆ ಬ್ಯಾಗ್ ನಲ್ಲ ಹಾಕಿಲ್ಲ. ಸಾಕ್ಷಿದಾರರು ಹೇಳುತ್ತಾರೆ ಪೋಟೋ ಸ್ಟುಡಿಯೋದವರು ನಮಗೆ ಕೊಟ್ಟಿಲ್ಲ. ನಿಪಿ-29 ರಲ್ಲಿ ಕಾಣಿಸಿರುವ ಗಂಟುಗಳಲ್ಲಿ ಏನಿದೆ ಅಂತ ಕಾಣುವುದಿಲ್ಲ ಅಂದರೆ ನಿಜ. ಸಾಕ್ಷಿದಾರರು ಹೇಳುತ್ತಾರೆ ಅದರಲ್ಲಿ ಗಾಂಜಾ ಇರುತ್ತದೆ ಅದನ್ನು ಪ್ಯಾಕ್ ಮಾಡಿ ನಂತರ ತೆಗೆದ ಪೋಟೋ ಇರುತ್ತದೆ. ಆ ಗಂಟುಗಳ ಮೇಲೆ ಯಾವುದೇ ಲೇಬಲ್ ಇಲ್ಲ ಅಂದರೆ ಸರಿಯಲ್ಲ. ಮು.ಮಾ.1 ರಿಂದ 4 ನನ್ನ ಸಮಕ್ಷಮ ಮಾಡಿಲ್ಲ ಅಂದರೆ ಸರಿಯಲ್ಲ. ಠಾಣೆಯಲ್ಲಿಯೇ ಪೋಟೋಗಳನ್ನು, ಡಿವಿಡಿಗಳನ್ನು ಸೃಷ್ಟಿ ಮಾಡಿದ್ದೇನೆ ಅಂದರೆ ಸರಿಯಲ್ಲ. 2 ನೇ ಆರೋಪಿಯು ಯಾವುದೇ ತಪ್ಪು ಮಾಡದೇ ಇದ್ದರೂ ಸಹ ನಾನು ಮತ್ತು ನಮ್ಮ ಮೇಲಾಧಿಕಾರಿಗಳು ಸೇರಿ ಸುಳ್ಳು ಆರೋಪ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.